ತಾರೀಖು 22ನೆ ಜುಲೈ 1907.

ನಂ. ರೆ. 497—ಲ್ಯಾ. ರೆ. 39-07—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಹಾಸನ ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿನಲ್ಲಿರುವ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್, ಮೆ॥ ಟಿ. ಧರ್ಮರಾಜ ಶೆಟ್ಟರಿಗೆ 1907ನೆ ಇಸವಿ ಜೂನ್ 20ನೆ ತಾರೀಖಿನಿಂದ 13 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಹುಕುಂ ಬಮೋಜೇಬ್,
ಸಿ. ಎಸ್. ಬಾಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 17ನೆ ಜುಲೈ 1907.

ನಂ. 645—5073, ಮಾರಿಕಣಿವೆ ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮೆ॥ ಕೆ. ಅನಂತಾಚಾರಿಯ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸನ 1907ನೆ ಜುಲೈ 6ನೆ ತಾರೀಖು 614—485ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಜೂನ್ 27ನೆ ತಾರೀಖು ಲಾಗಾಯ್ತು ಕೊಟ್ಟಿದ್ದ 15 ದಿನಗಳ ಪ್ರಿವಿಲೇಜ್ ರಜಾವನ್ನು ಇನ್ನೂ 1 ತಿಂಗಳು ಜಾಸ್ತಿ ಮಾಡಲ್ಪಟ್ಟಿದೆ.

ತಾರೀಖು 20ನೆ ಜುಲೈ 1907.

ನಂ. 652—5758, ಸ್ಪೆಷಲ್ ಡ್ಯೂಟಿ ಎಗ್ಸಿಕ್ಯೂಟಿವ್ ಇಂಜನಿಯರ್ ಆಫೀಸಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರ್ ಮೆ॥ ಕೆ. ಎಂ. ವಾಸುದೇವರಾವ್, ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ 177ನೆ ಆರ್ಟಿಕಲ್ ಪ್ರಕಾರ ಸನ 1907ನೆ ಜುಲೈ 29ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೇಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖೆ ಮೈಸೂರು ಗವರ್ನ್‌ಮೆಂಟ್ ಅಂಡರ್ ಸೆಕ್ರಿಟರಿ.

ರೈಲ್ವೆ ಇಲಾಖೆ.

ತಾರೀಖು 12ನೆ ಏಪ್ರಿಲ್ 1907.

ನಂ. 542—ರೈಲ್. 124, ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ಡಿನವರು ಬೀರೂರು-ಶಿವಮೊಗ್ಗ ರೈಲ್ವೆಗೆ ಸೇರಿದ ಶಿವಮೊಗ್ಗ ರೈಲ್ವೆ ಸ್ಟೇಷನಿಂದ ಕುಮಸಿ ಹತ್ತಿ ಇರುವ ಮ್ಯಾಂಗನೀಸ್ ಭಣಗಳಿಗೆ ಟ್ರಾಮು ಲೈನ್ನು ಹಾಕಿಕೊಳ್ಳಲು ಶಿವಮೊಗ್ಗ ಮ್ಯುನಿಸಿಪಲ್ ಬೋರ್ಡಿನವರ ಇರಾದೆಯನ್ನು ಪಡೆದು ಮಂಜೂರು ಹುಕ್ಕುಂ ಬಗ್ಗೆ ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀಮನ್ ಮಹಾರಾಜರ ಸರ್ಕಾರದವರು 1906ನೆ ಇಸವಿ 2ನೆ ಮೈಸೂರು ಟ್ರಾಮುವೇಗಳ ರೆಗ್ಯುಲೇಷನ್ 6ನೆ ಪ್ರಕರಣದ 3ನೆ ಕಲಂಗಳ ಅನುಸಾರ ಈ ಕೆಳಗೆ ನಮೂದಾಗುವ ಹುಕುಂ ದಯಪಾಲಿಸಿರುತ್ತಾರೆ.

ಅವತರಣಿಕೆ.

ಚಿಕ್ಕ ಹೆಸರು. 1. ಈ ಹುಕ್ಕುಂನ್ನ 1907ನೆ ಇಸವಿ ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ ಸ್ಟೀಮ್ ಟ್ರಾಮುವೆ—ಹುಕುಂ ಎಂಬುದಾಗಿ ಕರೆಯಲ್ಪಡತಕ್ಕದ್ದು.

ಅರ್ಥ ವಿವರಣೆ ಕಲಂ. 2. 1906ನೆ ಇಸವಿ ಮೈಸೂರು ಟ್ರಾಮುವೆ—ರೆಗ್ಯುಲೇಷನ್ನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಾಹರಿಸಲ್ಪಟ್ಟಿರುವ ಕಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು. ಆದರೆ ಈ ಹುಕುಂನಲ್ಲಿ "ಟ್ರಾಮುವೆ" ಅಥವಾ "ಕೆಲಸ" ಎಂಬ ಉಚ್ಚಾರಣೆಗಳು ಈ ಹುಕುಂನಿಂದ ವಂಜೂರಾಗಿರುವ ಟ್ರಾಮುವೆ ಮತ್ತು ಕೆಲಸಗಳು ಮತ್ತು ಕಾರ್ಯಗಳಿಂದು ಅರ್ಥವಾಗತಕ್ಕದ್ದು.

ಅನ್ವಯವಾಗತಕ್ಕ ಷರತ್ತುಗಳು. 3. ಈ ಹುಕುಂನಿಂದ ವಂಜೂರಾಗಿರುವ ಟ್ರಾಮುವೆ ಎಂಬುವದು 1906ನೆ ಇಸವಿ 2ನೆ ಮೈಸೂರು ಟ್ರಾಮುವೆ ರೆಗ್ಯುಲೇರ್ಷ ಅನುಸಾರಿಸಿ ಮತ್ತು ಈ ಹುಕುಂ ನಿಬಂಧನೆಗಳಿಗೆ ಬಳಪಟ್ಟು ಹಾಕಲ್ಪಡತಕ್ಕದ್ದು ಮತ್ತು ಕೆಲಸ ನಡಿಸಲ್ಪಡತಕ್ಕದ್ದು.

ಪ್ರಮೋಟರ್ಸ್ ಯಾ ಪ್ರವರ್ತಕರು. 4. ಮೈಸೂರು ಮ್ಯಾಂಗನಿಸ್ ಕಂಪನಿ ಲಿಮಿಟೆಡ್ಡಿನವರು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ಸ್ ಯಾ ಪ್ರವರ್ತಕರಾಗಿಯೂ ಮತ್ತು ಈ ಹುಕುಮಿನಲ್ಲಿ ಪ್ರಮೋಟರ್ಸ್ ಯಾ ಪ್ರವರ್ತಕರೆಂದು ಉದಹರಿಸಲ್ಪಟ್ಟಿರುವದಾಗಿಯೂ ಇರತಕ್ಕದ್ದು.